# ಎನಿತು ಬಣ್ಣಿಸಲಯ್ಯಾ ಬ್ಯಾನಿಯ ಬಗೆಯ...!



■ ಸುಮಾ ರಮೇಶ್
ಕಲೆ: ಸಂತೋಷ್ ಸಸಿಹಿತ್ಲು

‘ಕೆಲದಿನಗಳಿಂದ ತನ್ನ ಗುಂಡಿಗೆ ಲಾಂಗ್ ಬೆಲ್ ಹೊಡೆದಂತೆ ಹೊಡೆದುಕೊಳ್ತಿದೆ’ ಎಂದು ಶಿಕ್ಷಕನೊಬ್ಬ ಹೇಳಿದಾಗ, ‘ನಿಮ್ಮ ಶಾಲೆಗೆ ಇತ್ತೀಚೆಗೆ ಹೊಸ ಶಿಕ್ಷಕಿ ಬಂದಿರುವರಾ?’ ಎಂದು ಕೇಳಿ ವೈದ್ಯರು ಆತನ ಎದೆಬಡಿತವನ್ನು ಇನ್ನಷ್ಟು ಹೆಚ್ಚಿಸಿದ್ದರು. ಬೇನೆ ಎನ್ನುವುದು ನೋವಿನ ಸಂಗತಿಯಾದರೂ, ಬೇನೆಗಳ ಒಡನಾಟದಲ್ಲಿ ನಗೆಯೂ ಇದೆ.



ಸೋಫಾ ಮೇಲೆ ಕುಳಿತಿದ್ದ ಪತಿರಾಯರು ಅರ್ಧ ಗಂಟೆಯಾದರೂ ಅದೇ ಪೋಶ್ಚರ್‌ನಲ್ಲಿರುವುದು ಕಂಡು ಸೋಜಿಗವಾಯಿತು. ಹಾವಭಾವ ಮುಖಭಾವ ಎಲ್ಲಾ ಅಭಾವ ವೈರಾಗ್ಯಕ್ಕೆ ಸಿಲುಕಿದಂತಿತ್ತು. ಈ ಮಧ್ಯೆ ನಾನು ಅತ್ತಿಂದಿತ್ತ ಇತ್ತಿಂದತ್ತ ಐದಾರು ಬಾರಿ ಅಡ್ಡಾಡಿದ್ದೆ. ಅವರ ಕುತ್ತಿಗೆ ಒಂದು ಮಿಲಿ ಮೀಟರ್‌ನಷ್ಟೂ ನನ್ನೆಡೆಗೆ ಸರಿದಿರಲಿಲ್ಲ. ಹಾಗೆ ತಿರುಗಿ ನೋಡಲು ನಾನು ನಿಂಬೆ ಹಣ್ಣಿನಂತಹ ಹುಡುಗಿಯಾಗಿ ಉಳಿದಿರಲಿಲ್ಲ ಎಂಬುದು ಬೇರೆ ಮಾತು. ಇಬ್ಬರಲ್ಲೂ ವಯೋಸಹಜ ಆಕರ್ಷಣೆ ನಶಿಸಿ ವಿಕರ್ಷಣೆ ತಲೆ ಎತ್ತಿತ್ತು. ಆದರೂ ಹೀಗೆ ಅರೆ ತಾಸು ಮ್ಯೂಟ್ ಪೋಸ್‌ನಲ್ಲಿ ಕುಳಿತದ್ದು ವಿರಳ. ನಾನೇ ಅವರ ಬಳಿ ಸಾರಿ ಕುಶಲ ವಿಚಾರಿಸಿದೆ.

ಮೈಗೆ ಹುಷಾರಿಲ್ಲ ಎಂಬ ಉತ್ತರ ಬಂದಿತಾದರೂ ಕಾಯಿಲೆಯ ಬಗ್ಗೆ ವಿವರಣೆ ಕೊಡುವುದರಲ್ಲಿ ಗಲಿಬಿಲಿಗೊಂಡಿದ್ದರು. ಮೈಕೈ ನೋವಾ, ನೆಗಡಿಯಾ, ಗಂಟಲು ನೋವಾ, ಸುಸ್ತಾ...? ಎಂಬ ನನ್ನ ಪ್ರಶ್ನೆಗೆ ಉಸ್ ಉಸ್ ಎಂದು ಉಸಿರು ಬಿಡುತ್ತಾ ದಡ್ಡ ವಿದ್ಯಾರ್ಥಿಯಂತೆ ಪಿಳಿಪಿಳಿ ಕಣ್ಣು ಬಿಟ್ಟರು. ಏನಾಗ್ತಿದೆ ಅಂತ ಹೇಳ್ದೇ ಇದ್ರೆ ಮೆಡಿಸಿನ್ ಹೇಗಪ್ಪಾ ಕೊಡೋದು? ಎಂದು ತಲೆ ತುರಿಸುತ್ತಿದ್ದೆ. ‘ಏನೋ ಒಂತರಾ ಆಗ್ತಿದೆ’ ಎಂದರು.

‘ಯಾವ ತರ’ ಎಂದೆ.

ಮತ್ತದೇ ‘ಒಂತರಾ’ ಎಂಬ ಉತ್ತರ ಬಂತು.

ಈ ತರ ತರ ತರ ತರ ಒಂತರಾ... ಎಂಬ ಉತ್ತರದಿಂದ ನನಗೆ ಪರ ಪರ ಪರ ತಲೆ ಕೆರೆದುಕೊಳ್ಳುವಂತಾಯ್ತು. ವೈದ್ಯರ ಬಳಿಯಾದರೂ ನಮ್ಮ ಕಾಯಿಲೆಯ ಲಕ್ಷಣ ಹೇಳದಿದ್ದರೆ ಅವರು ತಾನೇ ಹೇಗೆ ಟ್ರೀಟ್ ಮಾಡಿಯಾರು? ಮುಖ ನೋಡಿ ಕಾಯಿಲೆ ಹೇಳಲು ಅವರೇನು ಜ್ಯೋತಿಷಿಗಳೇ? ಕುಡಿಯಲು ಒಂದೆರಡು ಲೋಟ ನೀರು ಕೊಟ್ಟೆ. ಕುಡಿದು ಒಂದೆರಡು ಬಾರಿ ತೇಗಿ ತಣ್ಣಗೆ ಕುಳಿತರು.

ಕೆಲವರು ಅದೆಷ್ಟು ಸೊಗಸಾಗಿ ತಮ್ಮ ಕಾಯಿಲೆಯ ಲಕ್ಷಣವನ್ನು ಹಲವು ಉಪಮೆಗಳನ್ನು ಬಳಸಿ ಬಣ್ಣಿಸುವರೆಂದರೆ ಅದನ್ನು ಕೇಳುವುದೇ ಒಂದು ಸೊಗಸು. ತಲೆ ಕಾದ ಹೆಂಚಾಗಿದೆ, ಹೊಟ್ಟೆ ಒಳ್ಗೆಲ್ಲಾ ಬುಲೆಟ್ ಓಡಾಡ್ದಂಗೆ ಗುಡುಗುಡು ಸದ್ದಾಗ್ತಿದೆ, ಕಿವಿಯೊಳಗೆ ಏನೋ ಗುಂಯ್ ಗುಡ್ತಾ ಇದೆ, ಕೈಕಾಲು ಜವ್ ಬಂದ್ಹಾಗಾಗುತ್ತೆ, ತಲೆ ಪಟ ಪಟ ಅಂತ ಹೊಡ್ಕಳ್ಳುತ್ತೆ, ಕಾಲು ಸೇದುತ್ತೆ, ಮೀನು ಖಂಡದಲ್ಲೆಲ್ಲಾ ಮುಲು ಮುಲು ಅನ್ನುತ್ತೆ. ಹೊಟ್ಟೆ ಉಬ್ಬರಿಸಿಕೊಂಡಿದೆ. ಅದರ ಒಳ್ಗೆಲ್ಲಾ ಇಲಿ ಓಡಾಡ್ದಂಗಾಗ್ತಿದೆ, ಸೋಪು ನೀರಲ್ಲಿ ತೊಳೆಸಿದಂಗಾಗ್ತಿದೆ. ಕಣ್ಣಿಗೆ ಬೆಂಕಿ ಹಾಕ್ದಂಗೆ ಉರೀತಾ ಇದೆ. ಮೂಗೊಳಗೆ ಗುಳುಗುಳು, ಗಂಟ್ಲಲ್ಲಿ ಗಸಗಸ, ನೆತ್ತಿ ಮೇಲೆ ಮೆಣಸು ಅರೆದಂಗಾಗ್ತಿದೆ. ಹಳೆಯ ಗಾಯ ಯಾಕೋ ನೀರಾಡ್ತಾ ಇದೆ. ಮುಖ ಬಾತ್ಕೊಂಡು ಗಡಿಗೆ ಗಾತ್ರ ಆಗಿದೆ. ಕಾಲೊಳಗೆ ಶೀತ ಆದಂಗೆ ಕೊರೀತಾ ಇದೆ. ಈ ನಾಯಿ ಕೆಮ್ಮು ಯಾಕೋ ಹೋಗವಲ್ದು, ಬರೀ ಒಣಕೆಮ್ಮು, ದನ್ಗೆಮ್ಮು... ಹೀಗೆ ಅವರ ಕಾಯಿಲೆಯ ಲಕ್ಷಣಗಳ ವಿವರಣೆಯಲ್ಲೂ ಕವಿತ್ವ, ಸೃಜನಶೀಲತೆ ಮೆರೆಯುವರು. ಇನ್ನು ಮಲಬದ್ಧತೆ, ಅತಿಸಾರದ ರೋಗಿಗಳು ವೈದ್ಯರ ಮುಂದಿರಿಸಿದ ಸ್ಟೂಲ್ ಮೇಲೆ ಕೂಲ್ ಆಗಿ ಕುಳಿತು ಅದರ ಬಣ್ಣ, ಸಾಂದ್ರತೆಯನ್ನು ಬಣ್ಣಿಸುವಾಗ ವೈದ್ಯರ ಅಕ್ಷಿಪಟಲದಲ್ಲಿ ಹಾಗೆಯೇ ಸ್ಟೂಲ್ ಎಕ್ಸಾಮಿನೇಶನ್ ರಿಪೋರ್ಟ್ ಹಾದು ಹೋಗುವುದು.

ಇನ್ನು ಕೆಲವರು ತಮ್ಮ ಕಾಯಿಲೆಯ ಡಯಾಗ್ನೋಸಿಸ್ ತಾವೇ ಹೇಳಿ ವೈದ್ಯರಿಗೆ ಬರೀ ನರ್ಸ್ ಕೆಲಸ ಮಾಡಲು ಸೂಚಿಸಿಬಿಡುವರು. ‘ಡಾಕ್ಟ್ರೇ ನಂಗೆ ಸಖತ್ ಹೀಟ್ ಆಗ್ಬುಟ್ಟಿದೆ. ತಂಪಾಗೋಕೆ ಔಷ್ಧಿ ಬರ್ಕೊಡಿ’. ‘ಮೂರು ದಿನದಿಂದ ಬರೀ ತೇಗು, ಗ್ಯಾಸ್ ಆಗ್ಬುಟ್ಟಿದೆ. ಆ ಜಲ್ಲು ಗಿಲ್ಲು ಎಲ್ಲಾ ಕುಡಿಯಕಾಗಲ್ಲ. ಒಳ್ಳೆ ಮಾತ್ರೆ ಇದ್ರೆ ಬರ್ಕೊಟ್ಬುಡಿ...’ ‘ನಂಗ್ಯಾಕೋ ಮೈ ಬಿಸಿ ಆದಂಗಿದೆ. ಮೈಕೈ ಎಲ್ಲಾ ಭಾರೀ ಹೊಡ್ತ... ಮಾತ್ರೆ ಗೀತ್ರೆಗೆಲ್ಲಾ ಬಗ್ಗಂಗೆ ಕಾಣಲ್ಲ. ಸುಮ್ನೆ ಒಂದು ಸೂಜಿ ಹಾಕ್ಬುಡಿ ಡಾಕ್ಟ್ರೇ’ ಎಂದು ಖುದ್ದು ಸಲಹೆ ನೀಡುವರು. ಮೂರು ನಾಲ್ಕು ದಶಕಗಳ ಹಿಂದೆ ಇಂತಹ ಪೇಶೆಂಟ್ಸ್ ಸಂಖ್ಯೆ ಹೆಚ್ಚಿತ್ತು. ಅಲ್ಪ ಸ್ವಲ್ಪ ಓದಿಕೊಂಡವರಾದರೆ... ‘ನಂಗ್ಯಾಕೋ ಇತ್ತೀಚೆಗೆ ಎದೆಯಲ್ಲಿ ಚುಚ್ಚಿದ ಹಾಗಾಗುತ್ತೆ. ಇಸಿಜಿ, ಎಕೋ, ಟಿಎಂಟಿ ಎಲ್ಲಾ ಒಂದ್ ರೌಂಡು ಮಾಡ್ಬಿಡಿ ಡಾಕ್ಟ್ರೇ’, ‘ಬೆಳಿಗ್ಗೆಯಿಂದ ಯಾಕೋ ತಲೆಯಲ್ಲಿ ಚಕ್ಕರ್ ಹೊಡೀತಿದೆ... ಕಣ್ಣು ಕತ್ಲೆ ಇಟ್ಹಾಗೆ ಆಗ್ತಿದೆ, ಒಂದ್ಸಲ ಬಿಪಿ ಚೆಕ್ ಮಾಡಿ’, ‘ಹೊಟ್ಟೆಯಲ್ಲಿ ಏನೋ ಒಂತರಾ ನೋವಾಗುತ್ತೆ, ಒಂದು ಸ್ಕ್ಯಾನ್ ಮಾಡ್ಬಿಡಿ’, ‘ತೋಳು ಎತ್ತಕಾಗ್ತಾ ಇಲ್ಲ ಒಂದು ಎಕ್ಸ್ ರೇ ಮಾಡ್ಬಿಡಿ’ ಎನ್ನುತ್ತಾ ತಮ್ಮ ಭೌತಿಕಾಕೃತಿಯ ವಿವಿಧ ಅಂಗಗಳನ್ನು ತೋರುತ್ತಾ ಸೂಚನೆ ನೀಡುತ್ತಿದ್ದರೆ, ವೈದ್ಯರು ಅಲ್ಲೇ ತಗುಲಿ